ಮೇಲಿನ ಯೋಜನೆಯ ಅನುಷ್ಠಾನದ ಒಟ್ಟು ಅವಧಿ 3 ವರ್ಷಗಳಿದ್ದು ಯೋಜನೆಯನ್ನು 2010–11 ನೇ ಸಾಲಿನಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಬಸ್ ನಿಲ್ದಾಣದ ಕಾಮಗಾರಿ

64. ಶ್ರೀ ಎಂ.ಟಿ.ಕೃಷ್ಣಪ್ಪ.

ಆರ್. ಅಶೋಕ ಮಾನ್ಯ ಸಾರಿಗೆ ಸಚಿವರು.

ಅ) ತುಮಕೂರು ಜಿಲ್ಲೆ ತುರುವೇಕೆರೆ ಸರ್ಕಾರಿ ಬಸ್‌ನಿಲ್ದಾಣದ ಕಾಮಗಾರಿಯ ಮಂದಗತಿಯಿಂದ ಸಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ತುರುವೇಕೆರೆ ಬಸ್ ನಿಲ್ದಾಣದ ಕಾಮಗಾರಿಗಳನ್ನು ದಿನಾಂಕ: 02–06–2008ರಂದು ಪ್ರಾರಂಭಿಸಲಾಗಿದ್ದು, ನಿಗದಿತ ಕಾಲಾವಧಿಯಾದ ದಿ: 1–6–2009 ಕ್ಕೆ ಪೂರ್ಣಗೊಳ್ಳಬೇಕಾಗಿತ್ತು. ಈ ಕಾಮಗಾರಿಯು ಆಗಸ್ಟ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ.

ಆ) ಈ ಕಾಮಗಾರಿಯು ಕಳಪೆ ಕಾಮಗಾರಿಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕಾಮಗಾರಿಯನ್ನು ವಿಸ್ತೃತ ವಿವರಣೆಯಂತೆ ನಿರ್ವಹಿಸಲಾಗುತ್ತಿದ್ದು, ಕಾಮಗಾರಿಯ ಗುಣಮಟ್ಟದಲ್ಲಿ ಯಾವುದೇ ವ್ಯತ್ಯಯ ಕಂಡುಬರುವುದಿಲ್ಲ.

ಇ) ಹಾಗಿದ್ದಲ್ಲಿ ಈ ಕಳಪೆ ಕಾಮಗಾರಿಯನ್ನು ಸರಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಉದ್ಭವಿಸುವುದಿಲ್ಲ.

ಅನುದಾನ

200 ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ)

ಬಿ.ಎಸ್. ಯಡಿಯೂರಪ್ಪ ಮಾನ್ಯ ಮುಖ್ಯ ಮಂತ್ರಿಯವರು

ಅ) 2008–09ನೇ ಸಾಲಿನ ಆಯವ್ಯಯದಲ್ಲಿ ಬಿಡುಗಡೆಯಾದ: ಮೀಸಲಿರಿಸಿದ್ದ ಒಟ್ಟು ಅನುದಾನವೆಷ್ಟು (ಯೋಜನಾವಾರು ವಿವರ ಒದಗಿಸುವುದು)?

2008–09ನೇ ಸಾಲಿನ ಪರಿಷ್ಕೃತ ಅಂದಾಜಿನಂತೆ ಯೋಜನೇತರಕ್ಕಾಗಿ 34167 ಕೋಟಿ ರೂ.ಗಳನ್ನು ಮತ್ತು ಯೋಜನೆಗಾಗಿ 20063 ಕೋಟಿ ರೂ.ಗಳನ್ನು ಒದಗಿಸಲಾಗಿತ್ತು. ತಾತ್ಕಾಲಿಕ ಲೆಕ್ಕದಂತೆ, ಯೋಜನೇತರದಲ್ಲಿ 34276 ಕೋಟಿ ರೂ.ಗಳನ್ನು ಹಾಗೂ ಯೋಜನೆಯಲ್ಲಿ 19884 ರೂ.ಗಳನ್ನು ಈ ಸಾಲಿನಲ್ಲಿ ಖರ್ಚು ಮಾಡಲಾಗಿದೆ. ಮಹಾಲೇಖಪಾಲರು ಸವಿವರ ಯೋಜನಾವಾರು ಲೆಕ್ಕವನ್ನು ಇದುವರೆಗೂ ಒದಗಿಸಿರುವುದಿಲ್ಲ.

ಆ) 2008–09ನೇ ಸಾಲಿನ ಆಯವ್ಯಯದಲ್ಲಿ ಶೇಕಡಾ 18ರ ಮೀಸಲಾತಿಗೆ ಬಿಡುಗಡೆ ಮಾಡಿದ ಹಾಗೂ ಮೀಸಲಿಟ್ಟಿದ್ದ ಒಟ್ಟು ಅನುದಾನವೆಷ್ಟು (ಸಂಪೂರ್ಣ ವಿವರ ಒದಗಿಸುವುದು)?